# ಹೊಸ 'ಸವಾರಿ'



'ಸವಾರಿ' ಮತ್ತು 'ಪೃಥ್ವಿ' ಚಿತ್ರಗಳ ನಿರ್ದೇಶಕ ಜೇಕಬ್ ವರ್ಗೀಸ್ ಈಗ ನಿರ್ಮಾಪಕರೂ ಹೌದು. 'ಸವಾರಿ–2' ಸಿನಿಮಾದ ನಿರ್ದೇಶನದ ಜೊತೆಗೆ, ಗೆಳೆಯರ ಬೆಂಬಲದೊಂದಿಗೆ ನಿರ್ಮಾಣದ ಹೊಣೆಯನ್ನೂ ಅವರು ವಹಿಸಿಕೊಂಡಿದ್ದಾರೆ.

ಕಳೆದ ವಾರ ಮುಹೂರ್ತ ನಡೆಸಿದ 'ಸವಾರಿ–2' ಅಪ್ಪಟ ಪ್ರೇಮ ಕಥೆಯ ಚಿತ್ರ. ಹಳೆಯ ಸವಾರಿಯಂತೆ ಇದೂ ಪಯಣದ ಕಥೆ. ಆದರೆ, ಹಳೆಯ ಚಿತ್ರಕ್ಕೂ ಈ ಸಿನಿಮಾದ ಕಥೆಗೂ ಯಾವುದೇ ಸಂಬಂಧವಿಲ್ಲ. ಇದು ಬೇರೆಯದೇ ಕಥೆ ಎನ್ನುವುದು ಚಿತ್ರದ ನಾಯಕ ಶ್ರೀನಗರ ಕಿಟ್ಟಿ ಅವರ ಬಣ್ಣನೆ. ಗಿರೀಶ ಕಾರ್ನಾಡ್, ಕರಣ್ ರಾವ್ ಅವರೊಂದಿಗೆ ಕಿಟ್ಟಿ ಕಾರೊಂದರಲ್ಲಿ ಹೋಗುವಾಗ ನಡೆಯುವ ಘಟನೆಗಳೇ ಚಿತ್ರದ ಕಥೆಯಂತೆ. 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ...' ಎನ್ನುವ ಗೋಪಾಲಕೃಷ್ಣ ಅಡಿಗರ ಸಾಲುಗಳು ಚಿತ್ರದ ಶೀರ್ಷಿಕೆಯ ಅಡಿಬರಹ. ಮುಹೂರ್ತದ ಸಂದರ್ಭದಲ್ಲಿ ಚಿತ್ರದ ಶೀರ್ಷಿಕೆಯ ಮುಂಭಾಗದಲ್ಲಿ ಹೊರೆ ಹೊತ್ತು ನಿಂತ ಕತ್ತೆ ಇರುವ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಸಿನಿಮಾದಲ್ಲಿ ಕತ್ತೆ ಕೂಡ ಒಂದು ಪ್ರಮುಖ ಪಾತ್ರ ಎನ್ನುವುದು ನಿರ್ದೇಶಕರ ಬಣ್ಣನೆ.

ಬೆಂಗಳೂರು, ಚಿಕ್ಕಮಗಳೂರು, ಕೆಮ್ಮಣ್ಣುಗುಂಡಿ, ಮಂಗಳೂರುಗಳಲ್ಲಿ ಚಿತ್ರೀಕರಣ ನಡೆಸಲು ಜೇಕಬ್ ಉದ್ದೇಶಿಸಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆದರೆ, 2014ರ ಏಪ್ರಿಲ್‌ನ ಬೇಸಿಗೆ ದಿನಗಳ ವೇಳೆಗೆ 'ಸವಾರಿ–2' ಚಿತ್ರಮಂದಿರಗಳಲ್ಲಿ ಇರಲಿದೆ. ಶಶಿಕುಮಾರ್ (ಛಾಯಾಗ್ರಹಣ), ಮಂಜು ಮಾಂಡವ್ಯ (ಸಂಭಾಷಣೆ) ಮಣಿಕಾಂತ್ ಕದ್ರಿ (ಸಂಗೀತ) ಚಿತ್ರದ ಪ್ರಮುಖ ತಂತ್ರಜ್ಞರು. ಅಂದಹಾಗೆ, ಕಿಟ್ಟಿಗೆ ನಾಯಕಿಯಿನ್ನೂ ಆಯ್ಕೆಯಾಗಿಲ್ಲ.



# ಗ್ಲಾಮರಸ್ ಹರ್ಷಿಕಾ!

ಶೀರ್ಷಿಕೆಯಿಂದಲೇ ಸುದ್ದಿ ಮಾಡುತ್ತಿರುವ ಘನಶ್ಯಾಂ ನಿರ್ದೇಶನದ 'ಬಿ3' ಸಿನಿಮಾ, ನಾಯಕಿ ಹರ್ಷಿಕಾ ಅವರ ಕಾರಣದಿಂದಲೂ ಗಮನಸೆಳೆದಿದೆ. ಈ ಚಿತ್ರದಲ್ಲಿ ಹರ್ಷಿಕಾ ತುಂಬಾ ಗ್ಲಾಮರಸ್ ಆಗಿ ಕಾಣಿಸಿಕೊಂಡಿದ್ದಾರೆ ಎನ್ನುವುದು ಗಾಂಧಿನಗರದ ಗುಸುಗುಸು.

ಬೇರೆಯವರ ಮಾತಿರಲಿ, ಸ್ವತಃ ಹರ್ಷಿಕಾ ಅವರಿಗೇ 'ಬಿ3' ಸಿನಿಮಾ ತಮ್ಮ ವೃತ್ತಿಜೀವನದ ವಿಭಿನ್ನ ಚಿತ್ರ ಎನ್ನಿಸಿದೆ. ಆದರೆ, ಚಿತ್ರದಲ್ಲಿ ಬಿಡುಬೀಸಾಗಿ ಕಾಣಿಸಿಕೊಂಡಿರುವ ಅಥವಾ ದೇಹ ಪ್ರದರ್ಶನ ಮಾಡಿರುವ ಎನ್ನುವ ಮಾತುಗಳನ್ನು ಅವರು ನಿರಾಕರಿಸುತ್ತಾರೆ. 'ಕಥೆ ತುಂಬಾ ವಿಶಿಷ್ಟವಾಗಿದೆ. ಕಥೆಯ ಕಾರಣದಿಂದಲೇ ಪಾತ್ರ ಒಪ್ಪಿಕೊಂಡಿರುವೆ. ಹೆಚ್ಚು ಗ್ಲಾಮರಸ್ ಆಗಿರುವ ಪಾತ್ರವಿದು. ಕಥೆಯ ಅಗತ್ಯಕ್ಕೆ ತಕ್ಕಂತೆ ಕಾಣಿಸಿಕೊಂಡಿರುವೆ ಅಷ್ಟೇ' ಎಂದು ಹರ್ಷಿಕಾ ಹೇಳುತ್ತಾರೆ. ದೇಹ ಪ್ರದರ್ಶನದ ಮೂಲಕ ಅವಕಾಶ ಗಿಟ್ಟಿಸಿಕೊಳ್ಳುವ ಅವಶ್ಯಕತೆ ನನಗಿಲ್ಲ ಎನ್ನುವುದು ಅವರ ಸ್ಪಷ್ಟನೆ.

'ಹದಿಮೂರರ ಹರಯದಲ್ಲಿ ಸಿನಿಮಾಕ್ಕೆ ಬಂದವಳು ನಾನು. ಆಗ ಗ್ಲಾಮರಸ್ ಆಗಿ ಕಾಣಿಸಿಕೊಳ್ಳಲು ಸಾಧ್ಯವಿರಲಿಲ್ಲ. ಈಗ ಚಿತ್ರರಂಗದಲ್ಲಿ ಸಾಕಷ್ಟು ಅನುಭವವಾಗಿದೆ. ಪಾತ್ರಗಳ ಆಯ್ಕೆಯಲ್ಲಿ ಎಚ್ಚರವಹಿಸುತ್ತಿರುವೆ' ಎನ್ನುವ ಹರ್ಷಿಕಾ ಅವರ ಮಾತಿನಲ್ಲಿ, ನಟಿಯಾಗಿ ತಾವು ಪಕ್ವವಾಗಿರುವ ಧ್ವನಿ ಇಣುಕುತ್ತದೆ.

ಗ್ಲಾಮರ್‌ನ ವಿಷಯ ಹೊರತುಪಡಿಸಿ ನೋಡುವುದಾದರೂ ಹರ್ಷಿಕಾ ಅವರ ಪಾಲಿಗೆ ಹಾಗೂ ನಾಯಕ ಶ್ರೀಕಾಂತ್ (ಶ್ರೀಕಿ) ಅವರಿಗೆ 'ಬಿ3' ತುಂಬಾ ನಿರೀಕ್ಷೆಯ ಸಿನಿಮಾ. ಇವರಿಬ್ಬರ ಈವರೆಗಿನ ಪಯಣ ಅಷ್ಟು ಏರುಗತಿಯಲ್ಲೇನೂ ಇಲ್ಲ. ಖ್ಯಾತನಾಮರ ಜೊತೆ ನಟಿಸಿದರೂ ನಾಯಕಿಯಾಗಿ ನೆಲೆ ಕಂಡುಕೊಳ್ಳುವ ಹರ್ಷಿಕಾ ಅವರ ಪ್ರಯತ್ನ ಇನ್ನೂ ಚಾಲ್ತಿಯಲ್ಲಿದೆ. 'ಒಲವೇ ಮಂದಾರ'ದ ಶ್ರೀಕಿ ಕೂಡ ಬ್ರೇಕ್‌ನ ನಿರೀಕ್ಷೆಯಲ್ಲಿದ್ದಾರೆ.

■ ರಘು